ದಿನಾಂಕಃ 29-11-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ವಿ. ಆರ್. ವಕೀಲರಿಂದಃ -**

ನಾನು ಆರೋಪಿಗೆ 25,65,000/- ರೂ.ಗಳನ್ನು ಕೊಡಬೇಕು ಎಂದು ಆರೋಪಿಯು ನನಗೆ ಲೀಗಲ್ ನೋಟಿಸ್ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಸದರಿ ನೋಟಿಸಿನ ದೃಢೀಕೃತ ನಕಲನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ಸದರಿ ನೋಟಿಸಿನಲ್ಲಿ ದಿಃ 30-12-2016 ರಂದು ನಮ್ಮ ಆರ್. ಬಿ. ಎಂಟರ್ ಪ್ರೈಸಸ್ ಖಾತೆಗೆ ರೂ. 18,64,000/- ಹಣವನ್ನು ಆರೋಪಿಯು ವರ್ಗಾಯಿಸಿರುತ್ತಾರೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಅದೇ ರೀತಿ ದಿಃ 10-07-2017 ರಲ್ಲಿ ನಮ್ಮ ಆರ್. ಬಿ. ಎಂಟರ್ ಪ್ರೈಸಸ್ ಖಾತೆಗೆ ರೂ. 05,61,000/- ಹಣವನ್ನು ಆರೋಪಿಯ ಖಾತೆಯಿಂದ ವರ್ಗಾಯಿಸಿರುತ್ತಾರೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ.

2. ನಿಡಿ-1 ನೋಟಿಸಿಗೆ ನಾನು ನನ್ನ ವಕೀಲರ ಮುಖಾಂತರ ಪ್ರತ್ಯುತ್ತರ ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿದಾರರು ಸದರಿ ಪ್ರತ್ಯುತ್ತರ ಪತ್ರದ ದೃಢೀಕೃತ ನಕಲನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-2** ಎಂದು ಗುರುತಿಸಲಾಯಿತು. ಸದರಿ ನಿಡಿ-2 ರ ಖಂಡಿಕೆ 3 ರಲ್ಲಿ ಆರೋಪಿಯು 2016-17 ಸಾಲ್ಲಿನಲ್ಲಿ ರೂ. 25,00,000/- ಹಣವನ್ನು ಕೊಡಬೇಕಾಗಿರುತ್ತದೆ. ಆದ್ದರಿಂದ ಸದರಿ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ಒಂದು ಸಾರಿ ರೂ. 18,64,000/-, ಇನ್ನೊಂದು ಬಾರಿ 5,61,000/- ರೂ.ಗಳನ್ನು ವರ್ಗಾವಣೆ ಮಾಡಿರುತ್ತಾನೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಆರೋಪಿಗೆ 25,00,000/- ರೂ. ಹಣವನ್ನು ಕೊಟ್ಟ ಬಗ್ಗೆ ಈ ಪ್ರಕರಣದಲ್ಲಾಗಲೀ ಓ.ಎಸ್. ನಂಃ 50/2023 ರಲ್ಲಾಗಲೀ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ನಗದು ರುಪದಲ್ಲಿ ಹಣ ನೀಡಲಾಗಿದೆ ಎಂದು ಉತ್ತರಿಸಿರುತ್ತಾರೆ.

3. ಆರೋಪಿಯ ಖಾತೆಯಿಂದ ರೂ.18,64,000/- ಹಾಗೂ ರೂ. 5,61,000/-ಹಣ 2016-17 ರಲ್ಲಿ ನನ್ನ ಪರ್ಮ್ ಖಾತೆಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಆರೋಪಿಗೆ ತಲಾ ರೂ. 5,00,000/- ಹಣದಂತೆ ಒಟ್ಟು 25,00,000/- ಹಣವನ್ನು ನಾನು ಕೊಟ್ಟ ಬಗ್ಗೆ ನಿಮ್ಮ ಬಳಿ ಯಾವ ದಾಖಲೆಗಳು ಇವೇ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿದಾರರು ಯಾವುದೇ ದಾಖಲೆಗಳು ಇಲ್ಲ, ನಗದು ರೂಪದಲ್ಲಿ ನೀಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಆರೋಪಿಗೆ ನೀಡಲು ಆ ಕಾಲಕ್ಕೆ ನನ್ನ ಬಳಿ ಹಣ ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಬಿ. ಬಿ. ಎಂ./ ಎಂ.ಬಿ. ಎ ಪದವೀಧರ ಎಂದರೆ ಸರಿ. ಆರೋಪಿಯು ನಮ್ಮ ಪರ್ಮ್ ಖಾತೆಗೆ ವರ್ಗಾಯಿಸಿದ ರೂ. 25,65,000/- ಹಣ ಸದರಿ ಖಾತೆಯಲ್ಲಿ **Carry forward** ಆಗುತ್ತಿದೆ ಎಂದರೆ ಇಲ್ಲ. ಸದರಿ ಹಣ ಜಮಾ ಆದ ಬಗ್ಗೆ ಬ್ಯಾಲನ್ಸ ಶೀಟ್ ನಲ್ಲಿ ತೋರಿಸಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಹಣವನ್ನು ಡ್ರಾ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ಸದರಿ ಹಣವನ್ನು ಯಾವ ಲೆಕ್ಕ ಶಿರ್ಷಿಕೆಯಲ್ಲಿ ತೋರಿಸಲಾಗಿದೆ ಎಂದರೆ ನಮ್ಮ ಆಡಿಟರ್ ಗೆ ತಿಳಿದಿದೆ.

4. 2016 ರಿಂದ 2024-25 ರವರೆಗೂ ಆರ್. ಬಿ. ಎಂಟರ್ ಪ್ರೈಸಸ್ ಚಾಲ್ತಿಯಲ್ಲಿ ಇದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು 2020-21 ರಿಂದ **ರವಿ ಬಸನಗೌಡ್ರ** ಹೆಸರಿನಲ್ಲಿ ಚಾಲ್ತಿ ಇರುತ್ತದೆ ಎಂದು ನುಡಿದಿರುತ್ತಾರೆ. ಜಿ. ಎಸ್.ಟಿ. ಸಂಖ್ಯೆ ಒಂದೇ ಇರುತ್ತದೆ ಎಂದು ಹೇಳುತ್ತಾರೆ. 2016 ರಿಂದ 2024 ರವರೆಗಿನ ನನ್ನ ಆದಾಯ ತೆರಿಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೀರಾ ಎಂಬ ವಕೀಲರ ಸಲಹೆಗೆ ಸಾಕ್ಷಿದಾರರು ಹಾಜರು ಪಡಿಸುತ್ತೇನೆ ಎಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯವನ್ನು ನೀಡಲಾಯಿತು.**

ತೆ.ನ್ಯಾ.ದಲ್ಲಿ ಬೆ. ಮಾಡಲಾಯಿತು. ನನ್ನ ಸಮಕ್ಷಮ

ಸಹಿ/-

ಓ.ಹೇ.ಕೆ.ಸರಿ ಇದೆ. ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,

ಹಿರೇಕೆರೂರು